ಅಧ್ಯಕ್ಷರು.—ಕೆಲವು ಕಡೆ ಜಿಲ್ಲಾಧಿಕಾರಿಗಳು ಅಡ್ಮಿನಿಸ್ಟ್ರೇಟರ್ ಆಗಿ ಆಡಿಷನಲ್ ಚಾರ್ಜ್ ಹೊಂದಿರುತ್ತಾರೆ.

ಶ್ರೀ ಎಂ.ಸಿ. ನಾನಯ್ಯ.—ನಮ್ಮ ಮಡಿಕೇರಿ ಅಸಿಸ್ಟೆಂಟ್ ಕಮೀಷನರ್‌ರವರಿಗೆ ೬ ಚಾರ್ಜ್‌ಗಳು ಇವೆ. ಒಟ್ಟಿನಲ್ಲಿ. ಈಗಲಾದರೂ ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸುತ್ತೇವೆಂದು ಹೇಳುವ ತೀರ್ಮಾನಕ್ಕೆ ಬಂದಿದ್ದೀರಾ ?

ಶ್ರೀ ಧರ್ಮಸಿಂಗ್.—ನಾವು ಹೋಗಿ ಇನ್ಸ್‌ಪೆಕ್ಷನ್ ಮಾಡಿದಾಗ ಎಲ್ಲೆಲ್ಲಿ ಆಡಿಷನಲ್ ಡ್ಯೂಟಿ ಗಳನ್ನು ಹೊಂದಿದ ಅಡ್ಮಿನಿಸ್ಟ್ರೇಟರುಗಳು ಇದ್ದು ವಸೂಲಿ ಕಾರ್ಯ ಸರಿಯಾಗಿ ಆಗುತ್ತಿಲ್ಲವೆಂದು ಕಂಡು ಬಂತೋ ಮತ್ತು ಯಾವ ಕಡೆ ಕೆಲಸ ಕಾರ್ಯ ಸರಿಯಾಗಿ ಆಗಿಲ್ಲವೆಂದು ದೂರು ಬಂದಿದೆಯೋ ಅಂಥ ಕಡೆಗಳಲ್ಲೆಲ್ಲ ಫುಲ್ ಟೈಂ ಅಡ್ಮಿನಿಸ್ಟ್ರೇಟರುಗಳನ್ನು ಮಾಡಿದ್ದೇವೆ. ವಿಶೇಷವಾಗಿ ಬಹಳಷ್ಟು ಇಲಾಖೆಗಳಿಂದ ಬಾಕಿ ವಸೂಲಾಗಬೇಕಾಗಿದೆ. ನಾನಾ ಕಾರಣಗಳಿಂದ ಅದು ಇನ್ನೂ ಬಂದಿಲ್ಲ. ಅವರಿಗೆ ಕೂಡ ನೋಟೀಸ್ ಕೊಟ್ಟಿದ್ದೇವೆ, ಮತ್ತು ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ.

SRI A. LAKSHMI SAGAR.—This statement refers to the Demand, Collection and Balance, and therefore, it refers to arrears. Are there any items of irrecoverable arrears which have become time barred, and if so, what is the total amount involved?

MR. SPEAKER.—Please put a separate question. Now the question hour is over.

QUESTIONS FOR ANSWER'S ON THE DAY

(but not taken up)

Misappropriation in the Mamadapur Village Seva Co-operative Society

202. SRI L.S. NAIK (Gokak).—Will the Minister for Co-operation be pleased to state.—

(a) whether it is a fact that a sum of Rs. 75.000 was misappropriated during the year 1978-79 in Mamadapur Village Service Co-operative Society in Gokak taluk ;

(b) the persons who have misappropriated this amount ;

(c) whether the accounts have been audited or not ?

SRI H.C. SRIKANTAIAH (Minister for Co-operation).—

(a) Since the accounts of Mamadapur Village Service Co-operative Society Limited of Gokak taluk for the year 1978-79 has not been audited so far, it is not possible to state at this juncture that the amount of this society has been misappropriated ;

(b) Since the accounts have not been audited, it is not possible to state the No. of persons who have misappropriated the amount.

(c) Since the accounts have not been brought up-to-date, the accounts could not be audited. Orders have been issued to the Secretary to bring the accounts up-to-date. After completing the accounts, concerned auditor will be requested to audit the accounts.

Representation by Members

Reg : Seizure of Purse-seine boats of South Canara by Kerala Government Authorities

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅಪ್ಪಣೆ ಪಡೆದು ಒಂದು ಪ್ರಮುಖ ವಿಚಾರವನ್ನು ಪ್ರಸ್ತಾಪಿಸಬಯಸುತ್ತೇನೆ. ನಿನ್ನೆ ಅಂದರೆ ಸೋಮವಾರ ದಿವಸ, ಕೇರಳ ಸರ್ಕಾರ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ೨೯ ಪರ್ಸಿಯನ್ ಮೀನುಗಾರರ ದೋಣಿಗಳನ್ನು ಹುಟ್ಟುಗೋಲು ಹಾಕಿದ್ದು ಮಾತ್ರವಲ್ಲದೆ ೨ ಕೋಟಿ ರೂಪಾಯಿ ಬೆಲೆ ಬಾಳುವ ಮೀನನ್ನು ಸ್ವಾಧೀನ ಪಡಿಸಿಕೊಂಡಿದೆ. ನನ್ನ ತಿಳಿವಳಿಕೆ ಮೇರೆಗೆ ಹೇಳುವುದಾದರೆ, ನಮ್ಮ ರಾಷ್ಟ್ರದಲ್ಲಿ ಎಲ್ಲಿ ಹೋದರೂ ಕೂಡ ಮತ್ಸ್ಯ ವ್ಯವಸಾಯವನ್ನು ಸಮುದ್ರ ತೀರದಲ್ಲಿ ಯಾವ ಒಂದು ಕಟ್ಟಪಾಡು ಇಲ್ಲದೆ ಮಾಡ ಬಹುದು. ಆದಕ್ಕೆ ಯಾವ ವಿಧಿನಿಯಮಗಳಾಗಲೀ, ಕಾನೂನು ಕಟ್ಟಲೆಗಳಾಗಲೀ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಒಂದು ಗಂಭೀರ ಪರಿಸ್ಥಿತಿ ಉಂಟಾಗಿದೆ. ಈ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರಿಂದ ಏನಾಗಿದೆ ಎಂದರೆ, ನಮ್ಮ ಜಿಲ್ಲೆಯಲ್ಲಿ ಸುಮಾರು ೪ ಸಾವಿರಕ್ಕೂ ಹೆಚ್ಚು ಕುಟುಂಬಗಳು ಅದರಲ್ಲೂ ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಕುಟುಂಬಗಳು ಕೇರಳ ಮತ್ತು ಮಂದ್ರಾಸ್‌ನಲ್ಲಿ ಮೀನನ್ನು ಹಿಡಿಯುವ ಕಸಬನ್ನು ಮಾಡುತ್ತಿವೆ. ಆವರು ಓಡು ಬಲೆಯ ಮೂಲಕ ಮೀನನ್ನು ಹಿಡಿಯುತ್ತಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಈ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈ ಸಂದರ್ಭದಲ್ಲಿ ನನಗೇನು ಅನ್ನಿಸುತ್ತದೆಂದರೆ, ಅಸ್ಸಾಂ ಮತ್ತು ವಿದೇಶಿಯರ ಪರಿಸ್ಥಿತಿಯ ರೀತಿಯಲ್ಲಿ ಈ ಆಂದೋಳನ ಪ್ರಾರಂಭವಾಗುತ್ತದೋ ಏನೋ ಎಂಬ ಭಯ ಆವರಿಸಿದೆ. ಈ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ. ಈ ವಿಷಯದಲ್ಲಿ ಕೂಡಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಆ ಬಡ ಮೀನುಗಾರರ ಗತಿ ಏನಾಗಿದೆ ಎಂಬುದು ಗೊತ್ತಿಲ್ಲ. ಒಂದೊಂದು ದೋಣಿಯಲ್ಲಿ ಸುಮಾರು ೨೦ ಕ್ಕೂ ಹೆಚ್ಚು ಮೀನುಗಾರರು ಇದ್ದಾರೆ. ಆವರನ್ನು ಅರೆಸ್ಟ್ ಮಾಡಿದ್ದಾರೋ ಆಥವಾ ಬಿಟ್ಟಿದ್ದಾರೋ ಯಾವ ವಿಚಾರಗಳೂ ಗೊತ್ತಾಗಲಿಲ್ಲ. ಆವರ ಕುಟುಂಬದವರಿಂದ ತಂತಿ ಸಂದೇಶಗಳು ಬರುತ್ತಿವೆ. ಈ ಪರಿಸ್ಥಿತಿಯನ್ನು ಗಂಭೀರವಾಗಿ ಆಲೋಚಿಸಿ ಸರ್ಕಾರದ ಗಮನಕ್ಕೆ ತರಬೇಕೆಂದು ತಿಳಿಸಲಿಚ್ಛಿಸುತ್ತಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಸಹ ಇದ್ದಾರೆ. ಆವರು ಇದನ್ನು ತೀಕ್ಷ್ಣವಾಗಿ ಆಲೋಚಿಸಬೇಕು. ಇಂಥ ಒಂದು ಅಮಾನುಷ ಕೃತ್ಯ ಇದುವರೆಗೆ ನಡೆದಿರಲಿಲ್ಲ. ಅಂಥದ್ದನ್ನು ಇವತ್ತು ಕೇರಳ ಸರ್ಕಾರ ಎಸಗಿದೆ. ಒಂದು ವೇಳೆ ಇಲ್ಲಿಯೂ ಆದೇ ಪರಿಸ್ಥಿತಿ ಉದ್ಭವವಾದರೆ ನನ್ನ ಲೆಕ್ಕಾಚಾರದ ಪ್ರಕಾರ ಅದನ್ನು ಸ್ಥಿಮಿತಕ್ಕೆ ತರುವುದು ಬಹಳ ಕಷ್ಟವಾಗುತ್ತದೆ. ಇದಕ್ಕೆ ಏನಾದರೂ ಕೇಂದ್ರ ಸರ್ಕಾರದ ಆವಶ್ಯಕತೆ ಇದ್ದರೆ, ಮಾನ್ಯ ಮುಖ್ಯ ಮಂತ್ರಿಗಳು ಆವರ ಗಮನವನ್ನು ಸೆಳೆದು ಈ ಒಂದು ಅಮಾನುಷ ಕೃತ್ಯವನ್ನು ಖಂಡಿಸುವುದು ಮಾತ್ರವಲ್ಲದೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಜಿ. ಕೊಡಗಿ.—ನಾವೂ ಕೂಡ ಈ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ.

ಅಧ್ಯಕ್ಷರು.—ತಾವೂ ಕೊಟ್ಟಿದ್ದೀರಿ, ಶ್ರೀ ಭಾವಿಯವರೂ ಕೊಟ್ಟಿದ್ದಾರೆ, ಜೊತೆಗೆ ಇನ್ನೂ ನಾಲ್ಕೈದು ಜನ ಸದಸ್ಯರೂ ಕೊಟ್ಟಿದ್ದಾರೆ.

SRI V.B. BHAVI.—Sir, I want to say something on this. I had also given a call attention notice. It pertains to the protection of